ಇ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದ್ದು ವಾಹನಗಳಿಂದಾಗುವ ವಾಯು ಮಾಲಿನ್ಯ ಪ್ರಮಾಣ ನಿಯಂತ್ರಿಸುವ ಮತ್ತು ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಆ ಆದೇಶವನ್ನು ಕೈಬಿಡುವ ಉದ್ದೇಶ ಸರ್ಕಾರಕ್ಕೆ ಇರುವುದಿಲ್ಲ.

ಬೆಂಗಳೂರು ನಗರದಲ್ಲಿ ನಗರ ಪಾಲಿಕೆ ಆಟದ ಮೈದಾನಗಳಲ್ಲಿ ಟೆನಿಸ್ ಕೋರ್ಟ್ ನಿರ್ಮಿಸುವುದು

187(49) ಶ್ರೀ ವಿ. ಸೋಮಣ್ಣ(ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ನಗರದಲ್ಲಿ ಮಹಾನಗರ ಪಾಲಿಕೆಯ ವರ್ಷದಲ್ಲಿರುವ ಆಟದ ಮೈದಾನಗಳೆಷ್ಟು?

ಆ. ಇವುಗಳ ಪೈಕಿ ಎಷ್ಟು ಅಂದ ಮೈದಾನಗಳು ಬಿನ್ನಿಮೇಲೆ ವಿಧಾನ ಸಭಾ ಕ್ಷೇತ್ರದಲ್ಲಿವೆ?

ಇ. ಈ ಆಟದ ಮೈದಾನಗಳಲ್ಲಿ ಟೆನ್ನಿಸ್ ಕೋರ್ಟ್‌ಗಳನ್ನು ನಿರ್ಮಿಸಲು ಕರ್ನಾಟಕ ಲಾನ್ ಟೆನ್ನಿಸ್ ಸಂಘಕ್ಕೆ ಈ ಮೈದಾನಗಳನ್ನು ನೀಡಲು ಸರ್ಕಾರದ ನಿರ್ಧರಿಸಿದೆಯೇ?

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು)

ಅ. 169

ಆ. 24

ಇ. ಮೇಲಿನ ಆಟದ ಮೈದಾನಗಳಲ್ಲಿ ಅನುಮತಿ ನೀಡಿರುವುದಿಲ್ಲ

ರಾಜ್ಯದಲ್ಲಿ ಪ್ಲೇವಿನ್ ಆನ್‌ಲೈನ್ ಲಾಟರಿ ನಿಷೇಧಿಸುವುದು

188(57) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನಡೆಯುತ್ತಿರುವ ಪ್ಲೇವಿನ್ ಕಂಪನಿಯ ಆನಲೈನ್ ಲಾಟರಿಗಳು ಯಾವುವು:

ಆ. ಕರ್ನಾಟಕ ಸರ್ಕಾರವು ಪ್ಲೇವಿನ್ ಕಂಪನಿಯ ಸಹಯೋಗದಿಂದ ಪ್ರತಿದಿನ ಲಕ್ಕಿ 3 ಎಂಬ ಆನ್‌ಲೈನ್ ಲಾಟರಿಯನ್ನು ಯಾವಾಗಿನಿಂದ ನಡೆಸುತ್ತಿದೆ.

ಇ. ರಾಜ್ಯ ಸರ್ಕಾರಕ್ಕೆ ಇದರಿಂದ ಇಲ್ಲಿಯವರೆಗೆ ಬಂದ ವರಮಾನವೆಷ್ಟು?

ಈ. ಈ ರಾಜ್ಯ ಸರ್ಕಾರದ ಹಾಗೂ ಸಿಕ್ಕಿಂ ಸರ್ಕಾರಗಳ ಆನ್‌ಲೈನ್ ಲಾಟರಿಯಿಂದ ರಾಜ್ಯದಲ್ಲಿ ಬಡವರು, ಮಧ್ಯಮ ವರ್ಗದವರು ಹಾಗೂ ಕೂಲಿಕಾರರು ತಮ್ಮ ಸಂಪಾದನೆಯನ್ನೆಲ್ಲಾ ವ್ಯಯ ಮಾಡಿಬೀದಿ ಪಾಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಉ. ಈ ಲಾಟರಿಯಿಂದ ನೂರಾರು ಬಡವರು ಮಾನಸಿಕ ರೋಗಿಗಳಾಗಿ ನಿಮ್ಹಾನ್ಸ್ ಸೇರಿರುವುದು ನಿಜವಲ್ಲವೇ.

ಊ. ತಮಿಳು ನಾಡಿನಲ್ಲಿ ಈ ಲಾಟರಿಯನ್ನು ನಿಷೇಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಋ. ರಾಜ್ಯದಲ್ಲೂ ಸಹ ಈ ಪ್ಲೇವಿನ್ ಕಂಪನಿ ನಡೆಸುತ್ತಿರುವ ಎಲ್ಲಾ ಆನ್‌ಲೈನ್ ಲಾಟರಿಗಳನ್ನು ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ. ಕರ್ನಾಟಕ ರಾಜ್ಯದಿಂದ ಲಕ್ಕಿ-3 ಸಿಕ್ಕಿಂ ಸರ್ಕಾರದಿಂದಃ

1. ಸೂಪರ್ ಲೊಟೋ

2. ಥಂಡರ್‌ಬಾಲ್ ಹಾಗೂ ಮಹಾರಾಷ್ಟ್ರ ಸರ್ಕಾರದಿಂದಃ

1. ಮಹಾಲೊಟೋ

2. ಬೋನಸ್ ಬಾಲ್

ಆ. 14-8.2002ರಿಂದ ನಡೆಸುತ್ತಿದೆ.

ಇ. ದಿನಾಂಕ : 14-8-2002 ರಿಂದ 22-2-2003 ರವರೆವಿಗೆ ಸರ್ಕಾರಕ್ಕೆ ಬಂದ ನಿವ್ವಳ ಆದಾಯ ರೂ. 42.96.75.925/-

ಈ. ಇಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ. ಇಂತಹ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ

ಊ. ಬಂದಿದೆ

ಋ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿದ್ಯುತ್ ಉತ್ಪಾದನೆಗೆ ಕುಡಿಯುವ ನೀರು

189(399) ಶ್ರೀ ಸುರೇಶ್ ಕುಮಾರ ಎಸ. (ರಾಜಾಜಿನಗರ):ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಯಚೂರು ಶಾಖೋತ್ಪನ್ನ ಕೇಂದ್ರದಲ್ಲಿ ಒಟ್ಟು ಎಷ್ಟು ಘಟಕಗಳು ವಿದ್ಯುತ್ ಉತ್ಪಾದಿಸುತ್ತಿದೆ;

ಆ. ಪ್ರತಿಯೊಂದು ಘಟಕವು ಉತ್ಪಾದಿಸುವ ವಿದ್ಯುತ್ ಎಷ್ಟು; (ಘಟಕವಾರು ವಿವರ ನೀಡುವುದು)

ಇ. ವಿದ್ಯುತ್ ಉತ್ಪಾದನೆಗೆ ಬಳಸಿ ಕೊಳ್ಳಲಾಗುತ್ತಿರುವ ನೀರು ಎಷ್ಟು ಕುಡಿಯುವ ನೀರು ಎಷ್ಟು ಕುಡಿಯುವ ನೀರಿಗೆ ಮೀಸಲ್ಪಟ್ಟಿದ್ದ ನೀರನ್ನು ವಿದ್ಯುತ್‌ಗೆ ಬಳಸಿಕೊಳ್ಳುತ್ತಿರುವುದು ನಿಜವೆ; ಇದಕ್ಕೆ ಕಾರಣಗಳೇನು;

ಈ. ಕುಡಿಯುವ ನೀರನ್ನು ವಿದ್ಯುತ್ ಉತ್ಪಾದನೆಗೆ ಬಳಸಿಕೊಳ್ಳುತ್ತಿರುವುದರಿಂದ ಜಲಕ್ಷಾಮ ಉಂಟಾಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ 210 ಮೆ.ವ್ಯಾ.ಸ್ಥಾಪಿತ ಸಾಮರ್ಥ್ಯ 7 ಘಟಕಗಳು ಇರುತ್ತವೆ. 25-2-2003ರಲ್ಲಿ 6 ಘಟಕಗಳು ವಿದ್ಯುತ್ ಉತ್ಪಾದನೆಗಳನ್ನು ಮಾಡುತ್ತಿದೆ.